

# ಕೈಲಾಸ – ಮಾನಸ ಸರೋವರ ಯಾತ್ರೆ

ಡಾ. ಹೆಚ್. ಪಾಂಡುರಂಗ ವಿಠಲ

## ಭಾಗ-೨

### ಶೆರಾತಾಂಗ್‌ನಲ್ಲಿ ಕೊನೆಯ ವೈದ್ಯಪರೀಕ್ಷೆ

ಮರುದಿನ ಶೆರಾತಾಂಗ್ (Sherathang) ಎಂಬ ಊರಿನಲ್ಲಿ ನಮ್ಮನ್ನು ಉಳಿಸಿದರು. ಪರ್ವತ ವಾತಾವರಣಕ್ಕೆ ನಮ್ಮ ದೇಹ ಹೊಂದಿಕೊಳ್ಳಲು ಒಂದು ದಿನ ಉಳಿಸುವ ಎರಡನೆಯ ಕೇಂದ್ರ ಇದು. ಎತ್ತರ ೧೩,೫೦೦ ಅಡಿ. ಇಬ್ಬರು ಮಲಗುವ, ಬಾತ್ ರೂಮು ಇರುವ, ತುಂಬ ಸೌಕರ್ಯಗಳಿರುವ ಕೋಣೆಗಳು. ಎಲ್ಲೋ ಕೆಲವರಿಗೆ ಮಾತ್ರ ಡಾರ್ಮೆಟರಿ. ನಾವು ಬಂದಾಗ ಮಧ್ಯಾಹ್ನದ ಊಟದ ಸಮಯ. ಎಲ್ಲರೂ ವಿಶ್ರಾಂತಿ ಪಡೆದ ಮೇಲೆ, ಐಟಿಬಿಪಿ (ಇಂಡೋ ಟಿಬೆಟನ್ ಬಾರ್ಡರ್ ಪೊಲೀಸ್) ಅಧಿಕಾರಿಗಳು ನಮ್ಮನ್ನು ಉದ್ದೇಶಿಸಿ ಅತಿ ಎತ್ತರದಲ್ಲಿ ಇರುವ ತೊಂದರೆಗಳ ಬಗ್ಗೆ, ಅವನ್ನು ಪರಿಹರಿಸಿಕೊಳ್ಳುವ ಮಾರ್ಗಗಳ ಬಗ್ಗೆ ವಿವರಿಸಿದರು. ಇದು ಮುಂದೆ ನಮಗೆ ತುಂಬ ಉಪಯೋಗಕ್ಕೆ ಬಂತು. ನಾನು ಬೆಳಿಗ್ಗೆ ತಿಂಡಿ ಬಲವಾಗಿ ತಿನ್ನುವವ; ಊಟಗಳು ಅಷ್ಟಕ್ಕಷ್ಟೇ. ಹೀಗೆ ಅತಿಯಾಗಿ ತಿಂದರೆ ಅರಗುವುದಿಲ್ಲ ಎಂಬುದು ತಿಳಿಯಿತು. ಸುಲಭವಾಗಿ ಅರಗುವ ಪದಾರ್ಥಗಳನ್ನೆ ಸ್ವಲ್ಪಸ್ವಲ್ಪ ತಿನ್ನಲು ಆರಂಭಿಸಿದೆ. ರುಚಿಯಾಗಿದೆ ಎಂದು ಎಂದೂ ಹೆಚ್ಚು ತಿನ್ನದೆ ಆರೋಗ್ಯ ಉಳಿಸಿಕೊಂಡೆ. ರಾತ್ರಿ ಸಾಕ್ಸ್ ಹಾಕಿಕೊಂಡು ಮಲಗಲಾರಂಭಿಸಿದೆ. ಹೆಚ್ಚು ಆಯಾಸ ಮಾಡಿಕೊಳ್ಳಲು ಹೋಗದೆ ಶಕ್ತಿ ಉಳಿಸಿಕೊಂಡೆ. ಈ ಊರಿನಲ್ಲಿ ಬರೀ ಸೈನಿಕರೇ ಇರುವುದು. ಕೊನೆಯ ಎಟಿಎಂ, ಕೊನೆಯ ಟೆಲಿಫೋನ್ ಎಕ್ಸ್‌ಚೇಂಜ್ ಇಲ್ಲಿ ಇವೆ. ಮೊಬೈಲ್‌ಗಳು ಕೆಲಸಕ್ಕೆ ಬಾರವು. ಮರುದಿನ ಟಿಬೆಟ್ ಪ್ರವೇಶವಾದ್ದರಿಂದ, ಎರಡು ಬಾರಿ ಹೋಗಿ ಪ್ರಯತ್ನಿಸಿ ಮನೆಗೆ ಫೋನ್ ಮಾಡಿದೆ. ಸೈನ್ಯದ ಫೋನೂ ಕೆಲವೊಮ್ಮೆ ಕೈಕೊಡುತ್ತದೆ ಎಂದು ಗೊತ್ತಾಯಿತು.

ಜುಲೈ ೧೭ರಂದು ಕೊನೆಯ ಚೆಕ್‌ಅಪ್ ನಡೆಯಿತು. ವಿಪರೀತ ಜ್ವರದಿಂದ ಬಳಲುತ್ತಿದ್ದ ನಮ್ಮ ಗುಂಪಿನ ವೃದ್ಧರೊಬ್ಬರು ಹಿಂದಿರುಗಲು ನಿರ್ಧರಿಸಿದರು. ಹಿಂದಿರುಗುತ್ತಿದ್ದ ನಾಲ್ಕನೇ ಬ್ಯಾಚ್ ಜೊತೆಗೆ ಅವರೂ ಹೊರಟರು. ಉಳಿದ ೩೫ ಮಂದಿಗೆ ಈ ಪರೀಕ್ಷೆಯಲ್ಲಿ ಮುಂದುವರಿಯಲು ಅರ್ಹತೆ ಗಳಿಸಿದ ಸಂತೋಷ. ನಮ್ಮನ್ನು ೬೨ರ ಚೀನಾ ಯುದ್ಧದ ವೀರ ಬಾಬಾ ಮಂದಿರಕ್ಕೆ ಕರೆದೊಯ್ದರು. ಅಲ್ಲಿ ಕೆಲವು ಸ್ಮರಣಿಕೆಗಳನ್ನು ಕೊಂಡೆವು. 'ಸೆರಾಟಾಂಗಿನಲ್ಲೆ ಮುಂದೆ ಬೇಕಾಗದ ಹೆಚ್ಚಿನ ಲಗೇಜುಗಳನ್ನು ಬಿಡಿ, ಅವನ್ನು ಮರಳುವಾಗ ಗ್ಯಾಂಗ್ಟೋಕ್‌ನಲ್ಲಿ ಪಡೆಯಬಹುದು' ಎಂದು ಹೇಳಿದಾಗ, ಹಾಗೇ ಮಾಡಿದೆವು. ಕಸ್ಟಮ್ಸ್ ಮತ್ತು ಇಮಿಗ್ರೇಷನ್ ಅಧಿಕಾರಿಗಳು ಬೇಕಾದ ಮಾಹಿತಿಗಳನ್ನು ಪಡೆದರು. ಇಲ್ಲಿಂದ ಐದು ಜನ ಸಿಕ್ಕಿಂ ಅಡುಗೆಯವರು ನಮ್ಮ ಜೊತೆಗೂಡಿದರು.

### ಚೀನಾ ಪ್ರವೇಶ

ಕೊನೆಗೂ ಭಾರತ ಬಿಡುವ ದಿನ ಬಂತು. ಜುಲೈ ೧೮ರಂದು ಬೆಳಿಗ್ಗೆ ಏಳು ಗಂಟೆಗೆ ನಾಥುಲಾ ಪಾಸ್‌ಗೆ ಹೊರಟೆವು. ಇಲ್ಲಿ ಐಟಿಬಿಪಿಯವರು ಒಳ್ಳೆಯ ಟೀ, ಸಿಹಿತಿಂಡಿ, ಒಣಹಣ್ಣುಗಳನ್ನು ನೀಡಿ ಸಂತೋಷಪಟ್ಟರು. ಎಂಟೂವರೆಗೆ (ಚೀನಾದಲ್ಲಿ ಹನ್ನೊಂದು ಗಂಟೆ) ಗಡಿ ದಾಟಿ, ಅಲ್ಲಿನ ಕಸ್ಟಮ್ಸ್, ಪೊಲೀಸ್ ಅಧಿಕಾರಿಗಳಿಂದ ಆರೋಗ್ಯ ಹಾಗೂ ಇನ್ನಿತರ ತಪಾಸಣೆಗಳಿಗೆ ಒಳಗಾದೆವು. ನಮಗೆ ಎರಡು ಬಸ್ಸುಗಳನ್ನು ನೀಡಿದರು. ಮೂರು ಪ್ಯಾಟ್ರೋಲ್ ಕಾರುಗಳಲ್ಲಿ ನಮ್ಮ ಜೊತೆ ಬಂದ ಈ ಅಧಿಕಾರಿಗಳೇ ಅಧಿಕೃತ ಗೈಡ್‌ಗಳಾಗಿ ಯಾತ್ರೆಯುದ್ದಕ್ಕೂ ನಮ್ಮ ಮುಂದೆ ಇದ್ದರು. ಇನ್ನೊಂದು ಟ್ರಕ್ ನಮ್ಮ ಲಗೇಜುಗಳನ್ನು ಒಯ್ಯುತ್ತಿತ್ತು. ಅದರ ಹಿಂದೆ ಮತ್ತೊಂದು ಪ್ಯಾಟ್ರೋಲ್ ಕಾರು. ಎರಡು ತಾಸು ಘಟ್ಟದ ಹಾದಿ ಕಳೆದು ಸಣ್ಣ ಪಟ್ಟಣದಲ್ಲಿದ್ದ ದೊಡ್ಡ ಹೋಟೇಲಿನಲ್ಲಿ ಉತ್ತಮ ಸಸ್ಯಾಹಾರಿ ಊಟ ಮಾಡಿದೆವು. ಇಲ್ಲಿ ಚೀನೀಯರು ೧೬೦೧ ಡಾಲರ್ ಹಾಗೂ ಇಮಿಗ್ರೇಶನ್ ಫೀ ಎಂದು ೫೦ ಯುವಾನ್ (RMB)ಗಳನ್ನು ಪಡೆದರು ಹಾಗೂ ನಮ್ಮ ಪಾಸ್‌ಪೋರ್ಟ್‌ಗಳನ್ನು

ತೆಗೆದಿಟ್ಟುಕೊಂಡರು. ಸಂಜೆ ೫ ಗಂಟೆಗೆ ಕಾಂಗ್ಮಾ (೧೩,೭೦೦ ಅಡಿ) ತಲುಪಿದೆವು. ಮೂರು ಅಂತಸ್ತಿನ ನಾಲ್ಕು ಕಟ್ಟಡಗಳಲ್ಲಿ ನಮ್ಮನ್ನು ಇಳಿಸಿದರು. ಮೂರು ಬೆಡ್ ಇರುವ ರೂಮುಗಳು. ಬಿಸಿನೀರು ತುಂಬಿದ ದೊಡ್ಡ ಫ್ಲಾಸ್ಕು ಕಿಚನ್ನಿನಲ್ಲಿ. ಭಾರತೀಯ ಮಾದರಿಯ ಟಾಯ್ಲೆಟ್ ಬಾತ್ ರೂಮು. ವಸತಿ ಅನುಕೂಲಕರವಿದ್ದರೂ, ಬಿಸಿನೀರು ಇಲ್ಲ. ನಮ್ಮವರ ಅಡುಗೆ. ಬಿಸಿ ಸೂಪ್‌ನಿಂದ ಊಟ ಪ್ರಾರಂಭ.

ಮರುದಿನ ೨೧ ರಂದು ಸುಮಾರು ೩೦೦ ಕಿ.ಮೀ. ಪ್ರಯಾಣಿಸಿ, ಸಂಜೆ ೪ಕ್ಕೆ ಲಾಜಿ (Lazi) ತಲುಪಿದೆವು. ದಾರಿಯಲ್ಲಿ ರುಚಿಯಾದ ಸೇಬು ಸಹಿತ ಊಟ. ಲಾಜಿಯಲ್ಲಿ ಉತ್ತಮ ಸೌಕರ್ಯಗಳಿದ್ದ ಹಳೆಯ ಟಿಬೆಟ್ ಲಾಜಿ ಪೆಸೆಂಟ್ಸ್ ಹೊಟೇಲಿನಲ್ಲಿ ವಾಸ್ತವ್ಯ. ವಿದೇಶೀ ಶೈಲಿಯ ಟಾಯ್ಲೆಟ್ ಬಾತ್‌ರೂಂ. ಪಟ್ಟಣ ತಿರುಗಿ ಕೆಲವು ವಸ್ತುಗಳನ್ನು ಕೊಂಡೆವು. ಮರುದಿನ ೪೭೫ ಕಿ.ಮೀ. ಕ್ರಮಿಸಿ, ಸಂಜೆ ೪.೩೦ಕ್ಕೆ ಜೊಂಗ್‌ಬಾ (Zhongba) ತಲುಪಿದೆವು. ಇಲ್ಲಿ ಎರಡು ಬೆಡ್‌ಗಳ ರೂಮುಗಳು. ಚೀನೀ ಮಾದರಿ ಟಾಯ್ಲೆಟ್ ಉಪಯೋಗಿಸಲು ಸ್ವಲ್ಪ ಕಷ್ಟ. ಉತ್ತಮ ಊಟ ತಿಂದು, ವಿಶ್ರಾಂತಿ ಪಡೆದೆವು. ಜುಲೈ ೨೧ರಂದು ದಾರ್ಚೆನ್ ಕಡೆಗೆ ನಮ್ಮ ಪ್ರಯಾಣ. ಮಾನಸ ಸರೋವರದ ಬಳಿ ಇರುವ ಇದೂ ೪೭೫ ಕಿ.ಮೀ. ದೂರ; ಸರೋವರ ನೋಡಿ ಎಲ್ಲರಿಗೂ ಖುಷಿ. ಇಲ್ಲಿಂದ ಮುಂದೆ ಟಿಬೆಟನ್ ಬಸ್‌ಗಳಲ್ಲಿ ಪ್ರಯಾಣ ಮುಂದುವರಿಯಿತು. ೩.೩೦ಕ್ಕೆ ದಾರ್ಚೆನ್. ಎರಡು ಬೆಡ್ ಇರುವ ರೂಮುಗಳು. ಊಟದ ಅನಂತರ ಎಲ್ಲೋ ಸಾಬ್ ತೀರ ಸುಸ್ತಾಗಿದ್ದ ಒಬ್ಬರನ್ನು ಅಲ್ಲಿಯೇ ಬಿಡಲು ತೀರ್ಮಾನಿಸಿದ್ದರು. ನಾವೆಲ್ಲ ಆಕ್ಸಿಜನ್ ಸಿಲಿಂಡರ್ ಜೊತೆಗೆ ಒಯ್ಯುವಂತೆ ಅವರಿಗೆ ತಿಳಿಹೇಳಿ, ಎಲ್ಲೋ ಸಾಬ್‌ಗೆ ಅವರನ್ನೂ ಕರೆದೊಯ್ಯಲು ವಿನಂತಿಸಿದೆವು. ಅಂತೂ ಯಾರೂ ಹಿಂದೆ ಉಳಿಯಲಿಲ್ಲ. ಕುದುರೆ ಹಾಗೂ ಪೋರ್ಟರ್‌ಗೆ ಇಲ್ಲೇ ತಲಾ ೨೩೪೦ ಯುವಾನ್‌ಗಳನ್ನು ಕೊಟ್ಟೆವು. ಇಲ್ಲೂ ಅತ್ಯಗತ್ಯವಾದ ವಸ್ತುಗಳಿದ್ದ ಒಂದು ಚೀಲ ಮಾತ್ರ ತೆಗೆದುಕೊಂಡು, ಉಳಿದುವನ್ನು ಒಂದು ರೂಮಿನಲ್ಲಿ ಇಟ್ಟುಬಿಟ್ಟೆವು.

### ಕೈಲಾಸ ಪರಿಕ್ರಮ ಪ್ರಾರಂಭ

ಜುಲೈ ೨೨ಕ್ಕೆ ದಾರ್ಚೆನ್‌ನಿಂದ ದೇರಾಪುಕ್‌ಗೆ (೧೫,೧೫೭ ಅಡಿ) ಹೊರಟೆವು. ಯಮದ್ವಾರ್ ಎಂಬ ಜಾಗದ ತನಕ ಬಸ್ಸು. ಅಲ್ಲಿ ಲಾಟರಿ ಎತ್ತಿ ಕುದುರೆ, ಪೋರ್ಟರ್ ಪಡೆದೆವು. ನನಗೆ ಸಿಕ್ಕ ಕುದುರೆ, ಕಾಸ್ತಾರ, ಪೋರ್ಟರ್ ಒಳ್ಳೆಯವರು. ಮಳೆ. ಎಲ್ಲರೂ ಬೆಂಚೀಲದಿಂದ ರೇನ್‌ಕೋಟ್ ತೆಗೆದೆವು. ಸ್ವಲ್ಪ ಹೊತ್ತಿನಲ್ಲಿ ಮಳೆ ನಿಂತಿತು. ಕಾಲುದಾರಿಯ ಸೌಂದರ್ಯ ಹೇಳತೀರದು. ಪಕ್ಕದಲ್ಲಿ ಅಲ್ಲಲ್ಲಿ ಕೈಲಾಸ ಪರ್ವತ ಕಾಣಿಸುತ್ತಿತ್ತು. ೩ ಗಂಟೆಗೆ ದೇರಾಪುಕ್ ತಲುಪಿದೊಡನೆ ಎಂತಹ ದೃಶ್ಯ! ಎರಡು ಬೆಟ್ಟಗಳ ನಡುವೆ ಕಾಣುವ ಕೈಲಾಸ ಪರ್ವತ, ಅಲ್ಲಿಂದ ಹರಿದು ಬರುವ ತೊರೆ. ಉದ್ದನೆಯ ವಸತಿಗೃಹದಲ್ಲಿ ಐದು ಜನ ಇರುವ ಕೊಠಡಿಗಳು. ಹಿಂಬದಿ ಟಾಯ್ಲೆಟ್‌ಗಳು, ಸ್ನಾನದ ಮನೆ ಇಲ್ಲ. ಕೈಲಾಸಪತಿಯ ಸಾನ್ನಿಧ್ಯದಲ್ಲಿ ಗೊಣಗುವವರಾರು? ಸೂಜಿಯಂತೆ ಚುಚ್ಚುವ ಮಳೆಹನಿಗಳ ನಡುವೆಯೇ ಎಲ್ಲರೂ ಆಗಾಗ ಕೈಲಾಸ ನೋಡುವವರೇ. ಕೈಲಾಸವನ್ನು ಇಷ್ಟು ಹತ್ತಿರದಿಂದ ಮತ್ತೆಲ್ಲಿಯೂ ನೋಡಲು ಅಸಾಧ್ಯ. ರುದ್ರ, ಚಮಕ ಹೇಳುತ್ತ ನಮ್ಮ ರೂಮಿನಲ್ಲಿ ತಂದ ಹಣತೆಗಳನ್ನು ಹೊತ್ತಿಸಿ, ಎಲ್ಲರೂ ಆರತಿ ಮಾಡಿದೆವು. ರಾತ್ರಿ ಊಟದ ಅನಂತರ ಮುಂದಿನ ದಿನದ ಕಠಿಣ ಯಾತ್ರೆಗೆ ಶಕ್ತಿ ಉಳಿಸಲು ನಿದ್ರೆ.

ಮರುದಿನ ತೀರ ನಸುಕಿನಲ್ಲೇ ಡೊಲ್ಮಾ ಪಾಸ್‌ಗೆಂದು (೧೮,೬೦೦ ಅಡಿ) ಹೊರಟೆವು. ಕುದುರೆಗೂ ಕಠಿನವಾದ ಹಾದಿ. ಪಕ್ಕದಲ್ಲೇ ಕೈಲಾಸ ಪರ್ವತ. ಇಳಿತ ಬಂದೊಡನೆ ಕುದುರೆ ಇಳಿಸಿದ ಕಾಸ್ತಾರ ನನ್ನನ್ನು ನಡೆಯಲು ಹೇಳಿ, ಇತರರೊಂದಿಗೆ ಗುಂಪಲ್ಲಿ ಹರಟುತ್ತ ಕೂತ. ಒಂದು ಕಿ.ಮೀ. ನಡೆದ ನಂತರ ಪೋರ್ಟರ್‌ಗೆ, 'ನನಗೆ ನಡೆಯುವುದು ಕಷ್ಟ' ಎಂದು ಹೇಳಿ ಕುದುರೆ ಬರುವವರೆಗೆ ಕುಳಿತೆ. ಆರು ಕಿ.ಮೀ. ಕ್ರಮಿಸಿ, ಡೊಲ್ಮಾಪಾಸ್‌ನಲ್ಲಿ ಇಳಿದಾಗ ಉಸಿರಾಡಲೂ ಕಷ್ಟ. ಸಿಕ್ಕಿಂ ಸರಕಾರ ನೀಡಿದ್ದ ಕರ್ಪೂರದ ಚೀಲ ಸಹಾಯಕ್ಕೆ ಬಂತು. ಪಕ್ಕದಲ್ಲಿ ಇರುವ ಗೌರೀಕುಂಡದಿಂದ ನೀರು ತರಲು ಯಾರೋ ಹಣ ನೀಡಿದರೆಂದು ನಮ್ಮ ಪೋರ್ಟರ್ ಇಳಿದು ಹೋದ. ಇನ್ನೊಬ್ಬ ನನ್ನ ಕೈ ಹಿಡಿದು, ಡೊಲ್ಮಾಪಾಸ್‌ನಲ್ಲಿ ನಿಲ್ಲಲು ಬಿಡದೆ ವೇಗವಾಗಿ ಇಳಿಸತೊಡಗಿದ. ನನಗೋ ಸ್ನೇಹಿತ ಎಂ. ರಾಜಗೋಪಾಲ್ ಬರೆದ 'ಸಾಕಾರದಿಂದ ನಿರಾಕಾರಕ್ಕೆ' ಪುಸ್ತಕದಲ್ಲಿ ಇರುವ ಕರಿಯ ಕಲ್ಲು, ಸಿದ್ಧ ಶಿಲೆ ಎಲ್ಲೋ ಹಾದಿಯ ಪಕ್ಕದಲ್ಲಿ ಇದೆ, ಅದನ್ನು ಗುರುತಿಸಿ, ಅದರ ಮೇಲೆ ನಾನೂ ಧ್ಯಾನ ಮಾಡಬೇಕು ಎಂಬ ತವಕ. ಅಲ್ಲಲ್ಲಿ ಕಂಡ ಕಲ್ಲುಗಳ ಮೇಲೆ ಕೂತೆ. ಅದು ಯಾವುದೂ ಅಲ್ಲ. ಎಲ್ಲೆಲ್ಲೂ ಉದ್ದ ದಾರಕ್ಕೆ ನೇತುಬಿಟ್ಟ ಪ್ರಾಯಶ್ಚಿತ್ತ ಪಟಗಳು, ಮಂತ್ರಧ್ವಜಗಳು. ಕೊನೆಗೆ ಇತರರ ಜೊತೆಗೆ ನಾನೂ ಇಳಿದೆ. ವಾಯು, ವರುಣ, ಸೂರ್ಯ ಮೂರೂ ದೇವತೆಗಳು ನಮ್ಮ ಮೇಲೆ ಕರುಣೆ ತೋರಿದರು. ಮಳೆ ಗಾಳಿ ಬೀಸಲಿಲ್ಲ. ಸೂರ್ಯನೂ ನೆತ್ತಿ ಸುಡಲಿಲ್ಲ. ಹದವಾದ ವಾತಾವರಣ. ಮೂರು ಕಿ.ಮೀ. ನಡೆದು (ಅದರಲ್ಲಿ ಹಿಮನದಿಯ ಮೇಲಿನ ಸ್ವಲ್ಪದೂರದ ಪ್ರಯಾಣವೂ ಇತ್ತು) ದಾರಿ ಪಕ್ಕದ ಹೋಟೆಲಿನಲ್ಲಿ ಕುಳಿತೊಡನೆ ಭಾರೀ ಮಳೆ. ನಮ್ಮ ಊಟದ ಬುತ್ತಿ ತೆಗೆದು ಸ್ವಲ್ಪ ತಿಂದೆ. ಬಿಸಿನೀರಿಗೇ ಹತ್ತು ಯುವಾನ್ ಕೊಡಬೇಕಾಯಿತು. ಅನಂತರ ಕುದುರೆಯ ಮೇಲೆ ೧೦ ಕಿ.ಮೀ. ಕ್ರಮಿಸಿ, ಜುಂಜುಯಿ ಪೂ (೧೫,೮೦೦ ಅಡಿ) ಅನ್ನು ೨ ಗಂಟೆಗೆ ತಲುಪಿದೆವು. ಎಲ್ಲ ೩೫ ಯಾತ್ರಿಗಳೂ ಕೈಲಾಸ ಪರಿಕ್ರಮ ಪೂರೈಸಿದುದು ನಮ್ಮ ಬ್ಯಾಚಿನ ವಿಶೇಷ. ಜುಂಜುಯಿ ಪೂ (Zhunzui Pu) ನಲ್ಲೂ ಐದು ಜನ ಮಲಗುವ ಪೆಟ್ಟಿಗೆಯಂತಹ ಕೋಣೆಗಳು, ರಸ್ತೆಯಾಚೆ ಟಾಯ್ಲೆಟ್. ಸಾಧನೆ ಮಾಡಿದ ಹಿಗ್ಗಿನಲ್ಲಿ ಊಟದ ಅನಂತರ ವಿಶ್ರಾಂತಿ.

ಮರುದಿನ ಮತ್ತೆ ಕುದುರೆ ಪ್ರಯಾಣ. ಕೊನೆಯಲ್ಲಿ ಅರ್ಧ ಕಿ.ಮೀ. ನಡೆಯಬೇಕಾಯಿತು. ಮುಂಜಾನೆಯ ಬಿಸಿಲು ಓರೆಯಾಗಿ ಬೀಳುತ್ತಿದ್ದುದರಿಂದ ಸ್ವರ್ಗಸದೃಶ ದೃಶ್ಯಗಳ ಫೋಟೋ ತೆಗೆದೆ. ಮುಂದೆ ಮಂತ್ರ ಬರೆದ ಕಲ್ಲುಗಳ ರಾಶಿಗಳ ಹತ್ತಿರ ಬಸ್ಸುಗಳು ನಿಂತಿದ್ದುವು. ೩೬ ಕಿ.ಮೀ. ಪರಿಕ್ರಮವು ಕುದುರೆ, ಕಾಸ್ತಾರ, ಪೋರ್ಟರುಗಳ ಸಹಾಯಹಸ್ತ, ಬೆಂಬಲ ಇಲ್ಲದಿದ್ದರೆ ಅಸಾಧ್ಯವೇ ಸರಿ. ಕೃತಜ್ಞತೆಯಿಂದ ಭಾಷೆ ಅರ್ಥವಾಗದಿದ್ದರೂ ಅವರಿಗೆ ಕಣ್ಣೀರಿನೊಡನೆ ಧನ್ಯವಾದ ಹೇಳಿ, ಟಿಪ್ಸ್ ನೀಡಿದೆವು.

### ಮಾನಸ ಸರೋವರದ ದಂಡೆಯಲ್ಲಿ ಎರಡು ದಿನ

ಬಸ್ಸುಗಳಲ್ಲಿ ಮಾನಸಸರೋವರದ ಕಡೆ ನಮ್ಮ ಪ್ರಯಾಣ ಆರಂಭವಾಯಿತು. ಪುನಃ ದಾರ್ಚನ್‌ಗೆ ಹೋಗಿ, ಅಲ್ಲಿ ಬಿಟ್ಟಿದ್ದ ವಸ್ತುಗಳನ್ನು ತೆಗೆದುಕೊಂಡು, ಮಾನಸ ಸರೋವರದ ದಂಡೆಯ ಮೇಲಿನ ಕುಗು ತಲುಪಿದಾಗ ಮಧ್ಯಾಹ್ನ ಎರಡೂವರೆ. ಇಲ್ಲೂ ಐದು ಜನ ಇರುವ ರೂಮುಗಳು, ದೂರ ಇರುವ, ಎಲ್ಲರಿಗೂ ಸಾಮಾನ್ಯವಾದ ಸಂಡಾಸುಗಳು. ಹೆಚ್ಚಿನ ಎಲ್ಲರೂ ಸರೋವರದಲ್ಲಿ ಪವಿತ್ರ ಸ್ನಾನ ಮಾಡಿ, ಪೂಜೆ ಮಾಡಿ ರೂಮಿಗೆ ಹಿಂದಿರುಗಿದರು. ಪ್ರಜ್ಞೆಯನ್ನು ಪ್ರತಿಬಿಂಬಿಸುವ, ವೇದಗಳನ್ನು ಗರ್ಭೀಕರಿಸಿರುವುದೆಂದು ನಂಬಲಾದ ಬ್ರಹ್ಮನಿರ್ಮಿತ ಮಾನಸ ಸರೋವರ ರೂಮುಗಳಿಂದಲೇ ಕಾಣುತ್ತಿತ್ತು. ಅದನ್ನು ನೋಡುತ್ತ, ಪಕೋಡ ತಿನ್ನುತ್ತ ಸಂಜೆ ಸುಂದರವಾಗಿ ಕಳೆಯಿತು. ಪುಸ್ತಕಗಳಲ್ಲಿದ್ದಂತೆ ದೇವರುಗಳು ಮಾನಸ ಸರೋವರದಲ್ಲಿ ಜ್ಯೋತಿರೂಪದಲ್ಲಿ ಸ್ನಾನ ಮಾಡುವುದು ಕಾಣುತ್ತದೇನೋ ಎಂದು ರಾತ್ರಿ ಹನ್ನೆರಡರಿಂದ ಒಂದೂವರೆಯವರೆಗೆ ನೋಡಿಯೇ ನೋಡಿದೆ. ಆಚೆ ದಡದ ದೀಪಗಳನ್ನು ಬಿಟ್ಟರೆ ಉಲ್ಕಾಪಾತ ಏನೂ ಕಾಣಲಿಲ್ಲ. ನಮ್ಮ ಗುಂಪಿನ ಉಪನಾಯಕ ಕ್ಯಾಪ್ಟನ್ ಗೋಪೀನಾಥರಿಗೆ ಕೇಳಿದಾಗ ಅವರೂ ಹೀಗೇ ಉತ್ತರಿಸಿದರು. ನೀಲಿ ಬಣ್ಣದ ಈ ದುಂಡನೆಯ ಸಿಹಿನೀರಿನ ಶಾಂತ ಸರೋವರ ಹೊತ್ತು ಹೋದಂತೆ ಹಸಿರಾಗಿ, ಕಂದು ಬಣ್ಣವಾಗಿ, ಕೊನೆಗೆ ಬಣ್ಣವಿಲ್ಲದ್ದಾಗುತ್ತಿತ್ತು. ಈ ಪರಿವರ್ತನೆ ನಾವಿದ್ದ ಎರಡು ದಿನವೂ ಇತ್ತು.

ಜುಲೈ ೨೫ರಂದು, ಮಾನಸದಲ್ಲಿನ ಪವಿತ್ರ ಸ್ನಾನದ ಬಳಿಕ ಹವನ ಪೂಜೆಗಳನ್ನು ನೆರವೇರಿಸಿದೆವು. ತಿಂಡಿಗೆ ಎಲ್ಲರೂ ಹೋದ ಮೇಲೆ, ಹವನ ಸರಿ ಆಗಲಿಲ್ಲ ಎಂದು ಭಾವಿಸಿದ ನಮ್ಮ ಗುಂಪಿನ ಪೂಜಾರಿಗಳು ನಾವು ನಾಲ್ವರಿಗೇ ಪುನಃ ಹವನ ಮಾಡಿಸಿದರು! ಹೊತ್ತಾಗಿ ಹೋದರೂ, ನಮಗೆ ತಿಂಡಿ ಇಟ್ಟಿದ್ದರು. ಸಂಜೆ ಹಣತೆಗಳನ್ನು ಹಚ್ಚಿ ಸಂಧ್ಯಾರತಿ ಮಾಡಿದೆವು. ಇಷ್ಟೊಂದು ಹಣತೆಗಳನ್ನು ಗೋಪಿ ತಿರುವನಂತಪುರದಿಂದ ತಂದಿದ್ದರು. ಯಾತ್ರೆ ಮುಗಿದು ಜುಲೈ ೨೬ರಂದು ನಾವು ಮರುಪ್ರಯಾಣ ಆರಂಭಿಸಿ, ಮಾನಸ ಸರೋವರ ಪರಿಕ್ರಮ ಮಾಡಿದೆವು. ದಾರಿಯಲ್ಲಿ ಎಡಕ್ಕೆ ಉಪ್ಪು ನೀರಿನ, ನವಮಿಯ ಚಂದ್ರನ ಆಕಾರದ, ದೊಡ್ಡ ಅಲೆಗಳ ರಾಕ್ಷಸತಾಲ್ (ಸರೋವರ). ರಾವಣ ಇಲ್ಲಿ ತಪಸ್ಸು ಮಾಡಿದ್ದನಂತೆ.



ಮಾನಸ ಸರೋವರ, ಕೈಲಾಸ ದರ್ಶನ

ಇದರ ದಂಡೆಯ ಮೇಲೆ ಇಪ್ಪತ್ತು ನಿಮಿಷ ನಿಂತು ಫೋಟೋ ತೆಗೆದೆವು. ಸರೋವರದ ನೀರು ತಗುಲಿದರೆ ಜಗಳವಾಗುತ್ತದೆಂಬ ನಂಬಿಕೆ ಇರುವುದರಿಂದ, ಅದರ ಸಮೀಪ ಯಾರೂ ಹೋಗಲಿಲ್ಲ. ನಮ್ಮ ಚೀನೀ ಮಹಿಳಾಧಿಕಾರಿ ನಗುತ್ತ ನಾಲ್ಕೈದು ಕಲ್ಲುಗಳನ್ನು ಒಂದರ ಮೇಲೊಂದು ಇಟ್ಟು ಮಾಡುವ ದೇವಸ್ಥಾನಗಳನ್ನು ಮಾಡಿ ಕೃತಾರ್ಥಳಾದಳು. ಚೀನೀಯರು ಸ್ನೇಹಭಾವ ತೋರಿದ್ದು ನಮಗೆ ಅಚ್ಚರಿ ತಂದಿತು. ಸಂಜೆಯ ಹೊತ್ತಿಗೆ ಜೋಂಗ್‌ಬಾ ತಲುಪಿದೆವು. ವಸತಿ ಅದೇ, ಮಾಮೂಲಿ ಊಟ.

### ಮರುಪ್ರಯಾಣದ ಇಳಿತ

ಮರುದಿನ ಬೆಳಗಿನ ತಿಂಡಿಗೆ ಮಾಡಿದ್ದ ಪೂರಿಗಳಲ್ಲೆ ಹಲವನ್ನು ಪ್ಯಾಕ್ ಮಾಡಿ, ತೆಗೆದುಕೊಂಡು ಹೋಗಿದ್ದು, ದಾರಿಯಲ್ಲಿ ಊಟಕ್ಕೆ ಅದನ್ನೇ ತಿಂದೆವು. ಮರುಪ್ರಯಾಣದ ನಿರಾಳತೆಯಲ್ಲಿ ಜೋಂಗ್‌ಬಾ ಬೇಸರ ತರಲಿಲ್ಲ. ೪.೩೦ ರ ಹೊತ್ತಿಗೆ ಲಾಜಿ ತಲುಪಿ, ಬೇರೆ ರೂಮುಗಳಲ್ಲಿ ವಾಸ್ತವ್ಯ ಹೂಡಿದೆವು. ಕಾರಣ ೭ನೆ ಬ್ಯಾಚಿನ ಯಾತ್ರಾರ್ಥಿಗಳು ಆಗಲೆ ಅಲ್ಲಿದ್ದರು. ಅಟ್ಯಾಚ್ಡ್ ಬಾತ್‌ರೂಂ ಇಲ್ಲದೆ, ಸ್ನಾನಕ್ಕೆ ಪರದಾಟ. ಮರುದಿನ, ೨೮ರಂದು ಊಟದಂತಹ ತಿಂಡಿ ತಿಂದು, ಹನ್ನೊಂದು ಗಂಟೆಗೆ ಹೊರಟು, ಸಂಜೆ ಐದಕ್ಕೆ ಕಾಂಗ್ಮಾ ತಲುಪಿದೆವು. ಅದೇ ಮೂರು ಅಂತಸ್ತಿನ ಕಟ್ಟಡ ಸಮುಚ್ಚಯದ ರೂಮುಗಳು. ರಾತ್ರಿ ಎಂಟಕ್ಕೆ ಭೂರಿಭೋಜನ. ಸಹಕಾರ ನೀಡಿದ ಚೀನೀ ಅಧಿಕಾರಿಣಿ, ಸಿಬ್ಬಂದಿಗೆ ಅವರ ಮಾರ್ಗದರ್ಶಿತ್ವ, ಸಹಾಯಕ್ಕೆ ನೆನಪಿನ ಕಾಣಿಕೆ ಕೊಟ್ಟು ಧನ್ಯವಾದ ಹೇಳಿದೆವು. ಚೀನೀಯರೂ ತಮ್ಮ ಸಾಂಸ್ಕೃತಿಕ ಸಂಗೀತದಿಂದ ನಮ್ಮನ್ನು ರಂಜಿಸಿ, ನಮ್ಮ ಅಧಿಕಾರಿಗಳೊಂದಿಗೆ ಕುಣಿದರು. ಕುಡಿಯಲು ಬೀರು, ಒಲ್ಲದವರಿಗೆ ಕೋಕಾಕೋಲ, ಸ್ನ್ಯಾಕ್ಸ್ ಇವು

ಗಳೆಲ್ಲ ಇದ್ದುವು. ಸಾಂಸ್ಕೃತಿಕ ಸಂಜೆಯ ಅನಂತರ ಒಳ್ಳೆಯ ಊಟ ದೊರೆಯಿತು.

೨೯ರ ಮುಂಜಾನೆ ೬.೩೦ಕ್ಕೆ ಮರುಪ್ರಯಾಣ. ದಾರಿಯಲ್ಲಿ ಪಾಸ್‌ಪೋರ್ಟುಗಳನ್ನು ಹಿಂದಿರುಗಿಸಿದರು. ೯.೩೦ರ ಹೊತ್ತಿಗೆ ನಾಥು ಲಾ ಬಾರ್ಡರ್ ತಲುಪಿ, ಚೀನೀಯರು ನಮ್ಮನ್ನು ಬೀಳ್ಕೊಟ್ಟರು, ನಮ್ಮ ಐಟಿಬಿಪಿ ಯೋಧರು ಟೀಯೊಡನೆ ಸ್ವಾಗತಿಸಿದರು, ಇಮಿಗ್ರೇಷನ್ ಪರಿಶೀಲನೆ ಮುಗಿದ ಮೇಲೆ ನಾವು ಶೆರಾಥಾಂಗ್ ತಲುಪಿದೆವು. ಅಲ್ಲಿ ಮಾಮೂಲಿ ರೂಮುಗಳು. ಆದರೆ, ವಾಪಸು ಬಂದ ಖುಷಿ. ಇಲ್ಲಿಯೂ ಐಟಿಬಿಪಿ ಯೋಧರು ಸಂಭ್ರಮದಿಂದ ಸ್ವಾಗತಿಸಿದರು, ಅಷ್ಟೇ ಅಲ್ಲ, ಒಳ್ಳೆಯ ಊಟವನ್ನೂ ಹಾಕಿದರು. ಊಟ ಬಡಿಸಿದ ರೀತಿ ಹೃದಯಸ್ಪರ್ಶಿಯಾಗಿತ್ತು. ಅನಂತರ ನಮಗೆಲ್ಲರಿಗೂ ನಮ್ಮ ಯಾತ್ರಾಸಾಧನೆಯ ಬಗೆಗೆ ಪ್ರಶಂಸಾಪತ್ರ, ನೆನಪಿನ ಕಾಣಿಕೆಗಳನ್ನು ನೀಡಿ, ಗೌರವಿಸಿದರು. ಅನಂತರ ಗ್ಯಾಂಗ್ಟೋಕ್ ಕಡೆ ಪ್ರಯಾಣ. ದಾರಿಯಲ್ಲಿ ಭೂಕುಸಿತ, ಸ್ವಲ್ಪ ಕಾಯುವಿಕೆಯ ಅನಂತರ ೩ ಗಂಟೆಯ ಹೊತ್ತಿಗೆ ಮಾಮೂಲಿ 'ಹೊಟೇಲ್ ಮಯೂರ' ತಲುಪಿದೆವು. ಅವೇ ರೂಮುಗಳನ್ನು ನಿಗದಿಪಡಿಸಿದ್ದರು. ಸಂಜೆ ಸಿಕ್ಕಿಂ ಟೂರಿಸಂ, ಸಿಕ್ಕಿಂ ಸರ್ಕಾರ, ಗ್ಯಾಂಗ್ಟೋಕ್ ಮೇಯರ್, ಸರ್ಕಾರದ ಟೂರಿಸಂನ ವಿಶೇಷ ಕಾರ್ಯದರ್ಶಿ ಇವರೆಲ್ಲರೂ ನಮ್ಮನ್ನು ಅಭಿನಂದಿಸುವ ಸಮಾರಂಭ. ಅವರಿಂದಲೂ ಸರ್ಟಿಫಿಕೇಟು, ನೆನಪಿನ ಕಾಣಿಕೆ. ಸೈನಿಕರೊಬ್ಬರು ನಮ್ಮ ಕ್ಯಾಮರಾ ಪಡೆದು, ಫೋಟೋಗಳನ್ನು ನಕಲು ಮಾಡಿಕೊಂಡರು. ಈ ರಾತ್ರಿಯೂ ಅಲ್ಲಿನ ಎಂ.ಜಿ. ರೋಡಿನಲ್ಲಿ ತಿರುಗಾಡಿದೆವು. ನಾನು ವಿಶೇಷ ಟೀ ಪುಡಿ, ಮಫ್ಲರ್ ಕೊಂಡೆ. ಸಿಕ್ಕಿಂ ರಾಜಧಾನಿಯ ವಾಸ, ಬಿಸಿನೀರಿನ ಶವರ್ ಸ್ನಾನ ಸೊಗಸಾಗಿತ್ತು. ಮರುದಿನ ಜುಲೈ ೩೦ರಂದು ಹೆಚ್ಚಿನವರು ಗ್ಯಾಂಗ್ಟೋಕ್ ದರ್ಶನ ಪ್ರವಾಸ ಕೈಕೊಂಡೆವು. ೨೩ನೆ ಕರ್ಮಪಾ ಬೌದ್ಧ ಮಠ, ದಾರಿಯಲ್ಲಿನ ಜಲಪಾತ, ಬೆಟ್ಟದ ಮೇಲಿನ ಗಣೇಶ ದೇವಸ್ಥಾನ, ಮಿಲಿಟರಿ ಶಿಬಿರದ ಹತ್ತಿರದ ಗುಡ್ಡದ ಮೇಲಿನ ಹೋಟೆಲು ಎಲ್ಲ ಚೆನ್ನಾಗಿದ್ದುವು. ರಾತ್ರಿ ಆರ್ಥಿಕ ಸಮಿತಿಯವರು ಸಾವಿರದ ಐನೂರು ರೂಪಾಯಿಗಳನ್ನು ಉಳಿಕೆ ಎಂದು ಎಲ್ಲರಿಗೂ ವಾಪಸ್ಸು ನೀಡಿದರು. ಬೇಸರವೆಂದರೆ ಅನೇಕ ಯಾತ್ರಿಗಳು ಮತ್ತು ಯೆಲ್ಲೋ ಸಾಬ್ ೩೦ ರ ಮುಂಜಾನೆಯೇ ನಮ್ಮನ್ನು ಬಿಟ್ಟು ಖಾಸಗಿ ಕಾರಿನಲ್ಲಿ ವಾಪಸು ಹೋದದ್ದು. ಅವರಿಗೆ ಮನೆಗೆ ಹೋಗುವ ಆತುರ.

ಕೊನೆಯ ಈ ಆರು ದಿನಗಳ ವಿವರವನ್ನು ಸಂಕ್ಷಿಪ್ತವಾಗಿ, ವಿವರಣೆ ಹೆಚ್ಚಿಲ್ಲದೆ ನೀಡಿರುವುದನ್ನು ಗಮನಿಸಿ. ಯಾತ್ರೆಯಿಂದ ಹಿಂದಿರುಗುವಾಗ ನಿರಾಳತೆ, ನೆಮ್ಮದಿಗಳ ಜೊತೆಯಲ್ಲಿಯೆ ಮುಗಿಯಿತಲ್ಲ ಎಂಬ ಖಿನ್ನತೆಯೂ ಅನುಭವಕ್ಕೆ ಬರುವುದರಿಂದ ಹೆಚ್ಚಿನ ವಿವರಗಳು ಮನಸ್ಸಿನಲ್ಲಿ ದಾಖಲಾಗುವುದಿಲ್ಲ. ನೋಡಿದ ಸ್ಥಳಗಳಿಗೆ ಮತ್ತೆ ಹೋದಾಗ, ಪರಿಚಿತತೆಯೂ ಏಕತಾನತೆಯ ಬೇಸರವನ್ನು ಉಂಟುಮಾಡುತ್ತದೆ. ನಮ್ಮ ನಾಯಕರು ಬೆಳಿಗ್ಗೆ ಬೇಗ ಹೊರಡದಿದ್ದರೆ ವಿಮಾನ ಸಿಕ್ಕುವುದಿಲ್ಲ. ಆರೂವರೆಗೇ ಹೊರಟುಬಿಡುತ್ತೇವೆ. ಉಳಿದವರು ತಾವೇ ವಾಹನ ಮಾಡಿಕೊಂಡು ಬರಬೇಕಾಗುತ್ತದೆ ಎಂದು ಎಚ್ಚರಿಸಿದ್ದರು. ಮುಂಜಾಗರೂಕತಾ ಕ್ರಮವಾಗಿ ಎಲ್ಲರಿಗೂ ವೈಯಕ್ತಿಕ ಒಂಟಿ ಟಿಕೇಟುಗಳನ್ನು ನೀಡಿದ್ದರು. ಜುಲೈ ೩೧ ರ ಬೆಳಿಗ್ಗೆ ಆರೂಮುಕ್ಕಾಲಿಗೇ ಬ್ಯಾಗ್ ಡೋಗ್ರಾಕ್ಕೆಂದು ಹೊರಟೆವು. ದಾರಿಯಲ್ಲಿ ರ್‍ಯಾಂಚೋ(Ranka)ನ ಮಾಮೂಲಿ ಸಿಂಡೆರೆಲ್ಲಾ ಹೋಟೆಲಿನಲ್ಲಿ ತಿಂಡಿ. ಈ ಬಾರಿ ನಮ್ಮ ಸ್ವಾಗತಕ್ಕಾಗಿ ನಾವಿರುವಷ್ಟು ಹೊತ್ತೂ ವೃದ್ಧನೊಬ್ಬ ಸಂತೂರ್ ವಾದ್ಯ ನುಡಿಸಿ, ಆಹ್ಲಾದಕರ ವಾತಾವರಣ ನಿರ್ಮಿಸಿದ. ಬ್ಯಾಗ್ ಡೋಗ್ರಾಕ್ಕೆ ಹನ್ನೊಂದೂವರೆಗೆ ತಲುಪಿದೆವು. ಸಿಕ್ಕಿಂ ಟೂರಿಸಂನವರು ನಮಗಾಗಿ ಏರ್‌ಪೋರ್ಟ್ ರೆಸ್ಟೋರೆಂಟಿನಲ್ಲಿ ಒಳ್ಳೆಯ ಊಟಕ್ಕೆ ಏರ್ಪಾಡು ಮಾಡಿದ್ದರು. ಸಂತೋಷದಿಂದ ಕೊನೆಯ ಭೋಜನವನ್ನು ಸ್ವೀಕರಿಸಿದೆವು. ದಿಲ್ಲಿಗೆ ಹೋಗುವವರ ವಿಮಾನ ಮಧ್ಯಾಹ್ನ ೩ ಗಂಟೆಗೆ ಹೊರಟಿತು. ನಮ್ಮ ಕೊಲ್ಕತಾ ವಿಮಾನ ಸಂಜೆ ೬ಕ್ಕೆ. ಅಲ್ಲಿಯವರೆಗೆ ಉಳಿದ ಪ್ರಯಾಣಿಕರ ಜೊತೆಗೆ ಬಂದು ಹೋಗುವ ವಿಮಾನಗಳನ್ನು ನೋಡುತ್ತಾ ಕುಳಿತೆವು. ನಮ್ಮ ಸರದಿ ಬಂದಾಗ, ವಿಮಾನವೇರಿ, ಕೊಲ್ಕತ್ತೆಗೆ ಏಳು ಗಂಟೆಗೆ ತಲುಪಿದೆವು. ಅಲ್ಲಿ ಮತ್ತೆ ಕಾಯುವಿಕೆ. ೧೩೦ ರೂ. ಕೊಟ್ಟು ಕಾಫಿ ಕುಡಿದೆವು. ಊಟ ಮಾಡದೆ, ಜೊತೆಗಾರ ಶ್ರೀನಿವಾಸ್ ಅವರ ಬುತ್ತಿಯ ಅವಲಕ್ಕಿಯನ್ನು ನಿಧಾನವಾಗಿ ತಿಂದು ಮುಗಿಸಿದೆವು. ರಾತ್ರಿ ೯.೩೦ ಗಂಟೆಗೆ ವಿಮಾನ ಹತ್ತಿ ಬೆಂಗಳೂರು ತಲುಪಿದಾಗ ೧೧ ಗಂಟೆ. ಶ್ರೀನಿವಾಸ್ ಮಕ್ಕಳು ಕಾದಿದ್ದರು. ಅವರು ಹೊರಟ ಮೇಲೆ, ಮೈಸೂರಿಗೆ ಹೊರಡುವ ೧೨ ಗಂಟೆಯ ಏರ್‌ಪೋರ್ಟ್ ಬಸ್ಸು ಹತ್ತಿ, ಲಗೇಜ್ ಇಟ್ಟು, ಹತ್ತಿರವಿದ್ದ ಹೋಟೆಲಿಗೆ ಹೋಗಿ ಕಾಫಿ ಕುಡಿದು, ಮತ್ತೆ ಬಸ್ಸಿಗೆ ಹತ್ತಿ, ತೂಕಡಿಸಲಾರಂಭಿಸಿದೆ. ಬಸ್ಸು ಹನ್ನೆರಡೂವರೆಗೆ ಬೆಂಗಳೂರು ಬಿಟ್ಟಿತು. ನಿದ್ದೆಯಿಂದ ಎದ್ದಾಗ ಮೂರೂಕಾಲು. ಆ ರಾತ್ರಿಯಲ್ಲಿ ಎಲ್ಲರೂ ಇಳಿದಮೇಲೆ ನಾನು ಇಳಿದು ಟಾಯ್ಲೆಟ್ಟಿಗೆ ಹೋಗಿ ಬಂದಾಗ, ಕಂಡಕ್ಟರ್ ಲಗೇಜು ಕ್ಯಾಬಿನ್ ಬಾಗಿಲು ತೆಗೆದು ನನಗಾಗಿ ಕಾಯುತ್ತಿದ್ದ. ಮನೆ ತಲುಪಿದಾಗ ಮೂರೂವರೆ. ಯಾತ್ರೆಯ ನೆನಪಿನ ಕಾಣಿಕೆ ಬೆತ್ತದ ವಾಕಿಂಗ್ ಸ್ಟಿಕ್ ಜೊತೆಯಲ್ಲಿತ್ತು.

ಈ ಸೊಗಸಾದ ಯಾತ್ರೆ, ನನ್ನ ಜೀವನದ ಸಿಹಿನೆನಪಾಗಿದೆ. ಯಶಸ್ವಿಯಾಗಿ, ಸುಸಂಘಟಿತವಾಗಿ, ಯೋಜನಾಬದ್ಧವಾಗಿ ಯಾತ್ರೆ ಮಾಡಿಸಿದ ಭಾರತ ಸರಕಾರಕ್ಕೆ ನಾನು ಋಣಿ. ನನಗಾದ ಸುಮಾರು ಎರಡು ಲಕ್ಷ ರೂ. ಖರ್ಚಿನಲ್ಲಿ ೩೦,೦೦೦ ರೂ. ಕೊಟ್ಟ ಕರ್ನಾಟಕ ಸರಕಾರಕ್ಕೂ, ೪,೦೦೦ ರೂ. ಕೊಟ್ಟ ದೆಹಲಿ ಸರಕಾರಕ್ಕೂ ಋಣಿ.

### ವೈಯಕ್ತಿಕ ಅನುಭವಗಳು

ಮಾನಸದಲ್ಲಾಗಲಿ, ಕೈಲಾಸದಲ್ಲಾಗಲಿ ದೇವರ ಬಗೆಗೆ ನನಗೆ ಯಾವ ಅನುಭವಗಳೂ ಆಗದ್ದು ನಿರಾಸೆ ತಂದರೂ, ಕೆಲವು ಆಶ್ಚರ್ಯಕರ ಅನುಭವಗಳು ನನಗಾಗಿವೆ. ಮೊದಲನೆಯದು

ನಾನು ಹೊರಟ ಬಗೆ. ಕೊನೆಯವರೆಗೂ ನಾನು ಹೊರಡುತ್ತೇನೆಂದು ಅನಿಸಿಯೇ ಇರಲಿಲ್ಲ. ಒಂದು ದಿನದ ರಜೆ ಉಳಿಸಲು ಹೊರಡುವ ದಿನವೂ ಆಫೀಸಿಗೆ ಹೋದೆ. ರೈಲು ೧೧.೨೦ಕ್ಕೆ. ನೋಡನೋಡುತ್ತಿದ್ದಂತೆಯೇ ಹತ್ತೂಮುಕ್ಕಾಲು ಆಯಿತು. ಸಹೋದ್ಯೋಗಿ ಶ್ರೀವತ್ಸ ರೈಲ್ವೆ ಸ್ಟೇಶನ್‌ಗೆ ಬಿಡುವುದು ಎಂದಿತ್ತು. ಆತ ವ್ಯಾನ್ ತಂದಿದ್ದ. ೧೧ಕ್ಕೆ ಆಫೀಸಿನಿಂದ ಹೊರಟು ಬ್ಯಾಗುಗಳನ್ನು ತರಲು ಮನೆಗೆ ಹೋದೆ. ಶ್ರೀವತ್ಸ , ''ನಿಮ್ಮ ಮನೆಯವರೂ ಬರಲಿ'' ಎಂದಾಗ ಅವಸರದಿಂದ ಆಕೆಯೂ ಹೊರಟದ್ದು ಒಳ್ಳೆಯದಾಯಿತು. ಮಧ್ಯೆ ಟ್ರಾಫಿಕ್ ಗೊಂದಲ, ಸ್ಟೇಷನ್ನಿನಲ್ಲಿ ವ್ಯಾನ್ ನಿಲ್ಲಿಸಿ ಬರುವಷ್ಟು ಸಮಯವಿಲ್ಲ. ಬ್ಯಾಗ್ ಹೊರಲು ಯಾರನ್ನು ಕರೆಯುವಷ್ಟೂ ಸಮಯವಿಲ್ಲ. ವ್ಯಾನಿನಿಂದ ಇಳಿದೊಡನೆ ಶ್ರೀಮತಿ ಮತ್ತು ನಾನು ಮೂರು ತೂಕದ ಬ್ಯಾಗ್‌ಗಳನ್ನು ಹೇಗೋ ಹೊತ್ತು ಪ್ಲಾಟ್‌ಫಾರಂ ತಲುಪಿ ಇನ್ನೇನು ಹೊರಡಲಿದ್ದ ಟ್ರೇನ್ ಹತ್ತಿದೆವು. ವಿದಾಯ ಹೇಳಿದೊಡನೆ ಟ್ರೇನ್ ಹೊರಟಿತು. ಮನೆಯಲ್ಲಿ ಕಟ್ಟಿಕೊಟ್ಟಿದ್ದ ಬುತ್ತಿಯನ್ನು ಬೆಂಗಳೂರು ಸ್ಟೇಷನ್‌ನಲ್ಲಿ ತಿನ್ನಲು ಹೊರಟರೆ ಚಟ್ನಿಪುಡಿ ಗಾಳಿಗೆ ಹಾರಬೇಕೆ? ತಲೆ ಎತ್ತಿ ನೋಡುವಾಗ ಅಶಕ್ತರಿಗಾಗಿರುವ ಇಲೆಕ್ಟ್ರಿಕ್ ಕಾರಿನ ಡ್ರೈವರ್, 'ಮುಂದುಗಡೆ ಪ್ರವೇಶಕ್ಕೆ ಹೋಗಲು ಆಗುವುದಿಲ್ಲ, ಬೇಕಿದ್ದರೆ ಆರನೆ ಪ್ಲಾಟ್‌ಫಾರಂ ಪ್ರವೇಶಕ್ಕೆ ಬಿಡುತ್ತೇನೆ, ಅಲ್ಲೂ ರಿಕ್ಷಾ ಸಿಗುತ್ತದೆ' ಎಂದು ಯಾರೋ ಕರೆದಿದ್ದವರಿಗೆ ಹೇಳುತ್ತಿದ್ದ. ಅವರು ಹತ್ತಲು ನಿರಾಕರಿಸಿದರು. ಕೂಲಿಯವರು ಸಿಗದೆ ಒದ್ದಾಡುತ್ತಿದ್ದ ನನಗೆ ಈ ಅವಕಾಶ ಸಿಕ್ಕಿತು. ನನ್ನ ಬ್ಯಾಗುಗಳೊಡನೆ ಹತ್ತಿದೆ. ಆ ಪ್ಲಾಟ್‌ಫಾರಂ ಪ್ರವೇಶಕ್ಕೆ ಹೋಗಿ, ರಿಕ್ಷಾ ಹಿಡಿದು ವಿಮಾನ ನಿಲ್ದಾಣಕ್ಕೆ ಹೋಗುವ ಸಿಟಿಬಸ್ ನಿಲ್ಲುವ ತಾಣಕ್ಕೆ ಹೋದೆ. ತಕ್ಷಣವೇ ಬಸ್ ಸಿಕ್ಕಿತು! ಇಲ್ಲವಾದಲ್ಲಿ ಸಂಜೆ ಆರರ ದಿಲ್ಲಿ ವಿಮಾನ ತಪ್ಪಿಹೋಗುತ್ತಿತ್ತು.

ಇದೇ ರೀತಿ, ನನಗೆ ದಿಲ್ಲಿಯಲ್ಲಿ ಬಿ.ಎಸ್.ಎನ್.ಎಲ್.ಸಿಗ್ನಲ್ ಸಿಗದೆ, ಮೊಬೈಲ್ ಕೆಲಸ ಮಾಡದೆ ಇದ್ದಾಗ ಸಹ ಪ್ರಯಾಣಿಕನ ಸಲಹೆ (ಮರುದಿನ ನನ್ನ ಪಕ್ಕ ಕುಳಿತ ವ್ಯಾಪಾರಿಯೊಬ್ಬ ಸರ್ವೀಸ್ ಪ್ರೊವೈಡರ್ ಆಯ್ಕೆಗೆ ಡಾಲ್ಫಿನ್ ಎಂದು ಹಾಕಲು ತಿಳಿಸಿದ), ರಾತ್ರಿ ಹತ್ತು ಗಂಟೆಗೆ ಮೆಟ್ರೋ ಹಿಡಿದು ಹೋಗಲು ಸಹಾಯ ಸಿಕ್ಕಿದ್ದು, ರಾತ್ರಿ ಹನ್ನೊಂದಕ್ಕೆ ಗುಜರಾತಿ ಸಮಾಜದಲ್ಲಿ ಸಿಕ್ಕ ಕೊನೆಯ ಊಟ (ಊಟ ಹೊರಗೆ ಟೇಬಲ್‌ನಲ್ಲಿ ತಿನ್ನಿ ಎಂದು ಹೇಳಿ ಕ್ಯಾಂಟೀನಿನವ ಬಾಗಿಲು ಹಾಕಿಕೊಂಡ) , ಇತರ ಯಾತ್ರಿಗಳ ಜೊತೆ ಅವಕಾಶ ಸಿಕ್ಕದೆ ಒಬ್ಬನಿಗೇ ಸಿಕ್ಕ ಖಾಲಿ ಡಾರ್ಮಿಟರಿಯಲ್ಲಿ ಮೂರು ರಾತ್ರಿ ಗಲಾಟೆ ಇಲ್ಲದೆ ನಿದ್ದೆ, ಸ್ನಾನ ಇತ್ಯಾದಿಗಳು ಆಗಿ ವಿಶ್ರಾಂತಿ ಸಿಕ್ಕಿದ್ದು, ಮೆಡಿಕಲ್ ಟೆಸ್ಟುಗಳಲ್ಲಿ ಸುಲಭವಾಗಿ ಪಾರಾದದ್ದು, ಯಮದ್ವಾರದಲ್ಲಿ ಲಾಟರಿಯಲ್ಲಿ ಒಳ್ಳೆಯ ಕುದುರೆ ಮತ್ತು ಪೋರ್ಟರ್ ಸಿಕ್ಕಿದ್ದು ಇವೆಲ್ಲ ಕಾಕತಾಳೀಯವೇ. ದಾರಿಯುದ್ದಕ್ಕೂ ಕುದುರೆಯ ತೊಂದರೆಯಿಂದ ನಮ್ಮಲ್ಲಿ ಕೆಲವರು ಕಷ್ಟಪಟ್ಟಿದ್ದು ಕಂಡೆ. ದಿಲ್ಲಿಯಲ್ಲಿ ತುಂಬಾ ಉತ್ಸಾಹದಿಂದ ಮಾತನಾಡುತ್ತಿದ್ದ ದೀಪಕ್ ಕುಮಾರ್ ಜೋಷಿ ಯಮದ್ವಾರದಲ್ಲೇ ಕುದುರೆಯಿಂದ ಬಿದ್ದರು. ಅನಂತರವೂ ದೇರಾಪುಕ್ ತಲಪುವಾಗ, ಮುಂದೆ ಇನ್ನೂ ಒಮ್ಮೆ, ಒಟ್ಟು ಮೂರು ಬಾರಿ ಬಿದ್ದು, ಜ್ವರದಿಂದ ಬಳಲಿದರು. ಅವರ ದುಬಾರಿ ಕ್ಯಾಮರಾ ಕೆಲಸ ಮಾಡಲೇ ಇಲ್ಲ. ಸದಾ ಒಳ್ಳೆಯ ಸೀಟು ಆಕ್ರಮಿಸುತ್ತಿದ್ದ ವಘೇಲಾ ದಂಪತಿಗಳು ಎಲ್ಲರಿಗೂ ಕಿರಿಕಿರಿ ಮಾಡುತ್ತಿದ್ದರೂ, ನನ್ನ ಜೊತೆ ಗ್ಯಾಂಗ್‌ಟೋಕ್‌ನಲ್ಲಿ ತುಂಬ ಆತ್ಮೀಯವಾಗಿ ಹರಟಿ, ಡಿಸ್ಕೌಂಟಿನಲ್ಲಿ ದಾರ್ಜಿಲಿಂಗ್ ಚಹಾಪುಡಿ ಕೊಡಿಸಿದರು! ನಮ್ಮ ಕುದುರೆಯವ ಮತ್ತು ಪೋರ್ಟರ್ ನನ್ನನ್ನೇ ಹುಡುಕಿಕೊಂಡು ಬಂದು ಸೇವೆ ಸಲ್ಲಿಸುತ್ತಿದ್ದರು. ಅವರು ಹಾಗೆ ಮಾಡದಿದ್ದರೆ, ನನಗೆ ಅವರಾರು ಎಂದೇ ತಿಳಿಯುತ್ತಿರಲಿಲ್ಲ. ಎಲ್ಲ ಚೀನೀ ಮುಖಗಳೂ ಒಂದೇ ಆಗಿ ಕಾಣುತ್ತವೆ. ಆದರೆ ಅವರು ಕೈಲಾಸದ ವಿವಿಧ ಮುಖಗಳನ್ನು ನೋಡಲು ಹೇಳಲಿಲ್ಲ. ನಾನು ಹಿಂದೆ ನೋಡಿದ್ದ ಫೋಟೋಗಳನ್ನು ನೆನಪು ಮಾಡಿಕೊಂಡು, ಯಮದ್ವಾರ ಸಮೀಪದ ದಕ್ಷಿಣದ, ಅನಂತರ ಪೂರ್ವದ ಮುಖಗಳನ್ನು ಗುರುತಿಸಿದೆ. ಡೊಲ್ಮಾ ಪಾಸ್‌ನಿಂದ ಇಳಿಯುವಾಗ ಬಂದ ಭಾರೀ ಮಳೆಯಲ್ಲಿ ಹೆಚ್ಚಿನವರು ನೆನೆದರೆ, ನಾನು, ನನ್ನ ಜೊತೆಯ ಮೂರು ನಾಲ್ಕು ಜನ ಮಾತ್ರ ಮಳೆ ಹನಿಯುವ ಮುನ್ನ ರಸ್ತೆ ಬದಿಯ ಹೊಟೇಲಿನಲ್ಲಿ ಆಶ್ರಯ ಪಡೆದಿದ್ದೆವು. ಗುಂಪಿನ ಎಲ್ಲರೂ ತಮ್ಮ ಆರೋಗ್ಯ ಸರಿಯಿದ್ದಾಗ ತುಂಬ ಹರಟುತ್ತಿದ್ದು, ಕಾಯಿಲೆಯಾದೊಡನೆ ಮೌನಿಗಳಾಗುತ್ತಿದ್ದರು. ನಾನು ಮಾತ್ರ ಮೊದಲಿನಿಂದಲೂ ಮಾತನಾಡಲು ಉತ್ಸಾಹ ತೋರಲಿಲ್ಲ. ಸಹ ವಸತಿಗರಲ್ಲಿ ಮಾತ್ರ ಅವಶ್ಯವಿದ್ದಷ್ಟು ಮಾತು. ಆರೋಗ್ಯ ಕೊನೆಯವರೆಗೂ ಚೆನ್ನಾಗಿಯೇ ಇತ್ತು. ಸೆರಾತಾಂಗ್‌ನಲ್ಲಿ ಡಯೇರಿಯ ಆದದ್ದು ಎರಡೇ ಮಾತ್ರೆಗಳಲ್ಲಿ ಸರಿಹೋಯಿತು. ಆ್ಯಸಿಡಿಟಿಯಾಗಲಿ, ತಲೆನೋವಾಗಲಿ ನನ್ನನ್ನು ಕಾಡಲೇ ಇಲ್ಲ. ನಾನು ಉದ್ವೇಗಗೊಂಡದ್ದು ಎರಡೇ ಬಾರಿ. ಮಾನಸ ಸರೋವರದಲ್ಲಿ ಅಣ್ಣನಿಗೆ ತರ್ಪಣ ಬಿಡುವಾಗ ಇನ್ನು ಅಣ್ಣ ನನ್ನ ಪಾಲಿಗೆ ಇಲ್ಲ ಎನ್ನಿಸಿದ ದುಃಖ ಒಮ್ಮೆ, ಹಾಗೂ, ಪರಿಕ್ರಮ ಮುಗಿದು, ಕುದುರೆ, ಪೋರ್ಟರುಗಳಿಗೆ ವಿದಾಯ ಹೇಳುವಾಗ, ಸ್ವಲ್ಪವೂ ತೊಂದರೆ ಕೊಡದೆ ಸಾಧುವಾಗಿ ನನ್ನನ್ನು ಹೊತ್ತ ಆ ಬಿಳಿ ಕುದುರೆಯ ಬಗೆಗೆ ಕೃತಜ್ಞತೆಯ ಸಂತೋಷ ಒಮ್ಮೆ. ಮಾನಸ ಸರೋವರದಲ್ಲಿ ದೇವರುಗಳು ಸ್ನಾನ ಮಾಡುವುದು ಕಾಣದಿದ್ದರೂ, ಕುಗು ದೇವಾಲಯದ ವಿಚಿತ್ರ ವರ್ಣ ವೈಭವದ ದೇವರುಗಳ ಫೋಟೋಗಳನ್ನು ತೆಗೆಯಲು ಸಾಧ್ಯವಾಯಿತು. ಗ್ಯಾಂಗ್‌ಟೋಕ್‌ನ ಕರ್ಮಪಾ ಮಠದಲ್ಲೂ ಹೀಗೇ ಫೋಟೋ ತೆಗೆದೆ. ಮೈಸೂರಿಗೆ ಅಪರಾತ್ರಿ ಬಂದಾಗಲೂ ಒಬ್ಬ ರಿಕ್ಷಾವಾಲಾ ರಿಕ್ಷಾತನಕ ನನ್ನ ಲಗೇಜು ಹೊತ್ತು, ಸುಖವಾಗಿ ನನ್ನನ್ನು ರಾತ್ರಿ ಮೂರೂವರೆಗೆ ತಲುಪಿಸಿದ! ಎಲ್ಲ ಸುಮುಖವಾಗಿ ನಡೆದದ್ದು ದೇವರ ಕೃಪೆ.

*(ನಾನು ತೆಗೆದ ಫೋಟೋಗಳನ್ನು ಇಂಟರ್‌ನೆಟ್‌ನಲ್ಲಿ ಡೌನ್‌ಲೋಡ್ ಮಾಡಿ ನೋಡಬಹುದು. ಲಿಂಕ್: https://flic.kr/s/aHskFSSbgV)*

(ಸಮಾಪ್ತಿ)